## ಕರ್ನಾಟಕ ಸರ್ಕಾರ

ಕ್ರಮಾಂಕ ಡಿಪಿಎಆರ್ 197 ಕೆಒಎಲ್ 93 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 26–4–1993.

## ಅಧಿಕೃತ ಜ್ಞಾಪನ

ಆಡಳಿತದಲ್ಲಿ ಕನ್ನಡ ಅನುಷ್ಠಾನ, ಸರ್ಕಾರ ಈಗಾಗಲೇ ಒಪ್ಪಿರುವ ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸುಗಳನ್ನು ಕಾರ್ಯಗತಗೊಳಿಸುವುದು, ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಕನ್ನಡದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಏಪ್ರಿಲ್ 1993–ಮಾರ್ಚ್ 1994ರ ಅವಧಿಯನ್ನು ಸರ್ಕಾರವು "ಕನ್ನಡ ಜಾಗೃತಿ ವರ್ಷ" ಎಂದು ಘೋಷಿಸಿದೆ.

2) ಕನ್ನಡ ಜಾಗೃತಿ ವರ್ಷದ ಆಚರಣೆ ಸಂದರ್ಭದಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ–

ಅ) ಕನ್ನಡ ಅನುಷ್ಠಾನ ಮತ್ತು ಸರ್ಕಾರ ಈಗಾಗಲೇ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸುಗಳನ್ನು ಜಾರಿಗೊಳಿಸುವ ಸಂಬಂಧ ಹೊರಡಿಸಿರುವ ಆದೇಶಗಳನ್ನು ಸಮಗ್ರವಾಗಿ ಕಾರ್ಯಗತಗೊಳಿಸುವುದು;

ಆ) ಆಡಳಿತ ಭಾಷೆ, ಕನ್ನಡ ಸಾಹಿತ್ಯ, ಕರ್ನಾಟಕ ಸಂಸ್ಕೃತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುವುದು;

ಇ) ಆಡಳಿತ ಕನ್ನಡ ತರಬೇತಿ ಕಾರ್ಯಕ್ರಮಗಳ ಸಂಖ್ಯೆ ಹೆಚ್ಚಿಸುವುದು, ಆಡಳಿತ ಪೂರಕ ಸಾಹಿತ್ಯ ಪ್ರಕಟಣೆ ಮತ್ತು ಸರಬರಾಜು ಕಾರ್ಯಗಳನ್ನು ವ್ಯವಸ್ಥಿತಗೊಳಿಸುವುದು;

ಈ) ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ವಿದ್ಯುತ್‌ಚಾಲಿತ ಬೆರಳಚ್ಚು ಯಂತ್ರ ಮತ್ತು ಇತ್ಯಾದಿಗಳಲ್ಲಿ ಕನ್ನಡವನ್ನು ಅಳವಡಿಸಲು ಯೋಜನೆ ರೂಪಿಸುವುದು;

ಉ) ದೈನಂದಿನ ಬಳಕೆಯಲ್ಲಿರುವ ನಮೂನೆ, ವಹಿ ಮತ್ತಿತರೆ ಲೇಖನ ಸಾಮಗ್ರಿಗಳು ಕನ್ನಡದಲ್ಲೇ ಮುದ್ರಣವಾಗುವಂತೆ ನೋಡಿಕೊಳ್ಳುವುದು;

ಊ) ದೈನಂದಿನ ಆಡಳಿತದಲ್ಲಿ ಅಗತ್ಯವೆನಿಸುವ ಇಲಾಖಾ ಕೈಪಿಡಿಗಳು, ಸೇವಾ ಸಂಬಂಧ ಕೈಪಿಡಿಗಳು, ಪ್ರಮುಖ ಅಧಿನಿಯಮಗಳು–ಇವುಗಳನ್ನು ಆದ್ಯತೆಯ ಆಧಾರದ ಮೇಲೆ ಕನ್ನಡಕ್ಕೆ ಭಾಷಾಂತರಿಸಿ ಮುದ್ರಿಸುವುದು.

3) ಸರ್ಕಾರದ ಎಲ್ಲ ಇಲಾಖೆಗಳು, ವಿಶ್ವವಿದ್ಯಾನಿಲಯಗಳು, ಸರ್ಕಾರದಿಂದ ರಚಿತವಾದ ಹಾಗೂ ಸರ್ಕಾರದ ಅನುದಾನ/ಧನಸಹಾಯ ಪಡೆಯುತ್ತಿರುವ ಎಲ್ಲ ಸ್ವಾಯತ್ತ ಸಂಸ್ಥೆಗಳು, ಕಾರ್ಪೋರೇಷನ್‌ಗಳು, ಪ್ರಾಧಿಕಾರಗಳು, ಎಲ್ಲ ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಕಾರ್ಖಾನೆಗಳು–ಕನ್ನಡ ಜಾಗೃತಿ ವರ್ಷವನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಲು ಹಾಗೂ ಆ ಸಂಬಂಧ ಕಾರ್ಯಕ್ರಮಗಳನ್ನು ಪೂರ್ಣ ಜಾರಿಗೊಳಿಸಲು ಕೋರಿದೆ.

(ಜಾ.ಕ್ರಿ. ಲಿನ್)
ಸರ್ಕಾರದ ಮುಖ್ಯ ಕಾರ್ಯದರ್ಶಿ.